# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 12.03.2025ರಂದು ಪೂರ್ವಾಹ್ನ ಗಂಟೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2025ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು :**

| | | |
|---|---|---|
| 1. | ಪ್ರೊ ಪಿ. ಎಲ್.ಧರ್ಮ<br>ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಕವಿತಾ ಕೆ.ಆರ್.<br>ಜಂಟಿ ನಿರ್ದೇಶಕರು (ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 3. | ಪ್ರೊ. ಪರಿಣಿತ<br>ಡೀನರು, ಕಲಾ ನಿಕಾಯ | ಸದಸ್ಯರು |
| 4. | ಡಾ ಎಸ್.ಬಿ ಎಂ. ಪ್ರಸನ್ನ | ಸದಸ್ಯರು |
| 5. | ಡಾ ಕೆ.ಸಿ. ಮಹದೇಶ | ಸದಸ್ಯರು |
| 6. | ಡಾ. ಶಂಕರಮೂರ್ತಿ ಎಚ್.ಕೆ. | ಸದಸ್ಯರು |
| 7. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು |
| 8. | ಶ್ರೀ. ಸಿ.ಎ. ನಿತಿನ್ ಜೆ ಶೆಟ್ಟಿ | ಸದಸ್ಯರು |
| 9. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು |
| 10. | ಶ್ರೀ ರಘುರಾಜ್ | ಸದಸ್ಯರು |
| 11. | ಶ್ರೀ ಅಚ್ಯುತ ಗಟ್ಟಿ | ಸದಸ್ಯರು |
| 12. | ಶ್ರೀ ಮಹಮ್ಮದ್ ಸವಾದ್ | ಸದಸ್ಯರು |
| 13. | ಪ್ರೊ ಹೆಚ್. ದೇವೆಂದ್ರಪ್ಪ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 14. | ಶ್ರೀಮತಿ ಪುಷ್ಪಲತಾ ಹೆಚ್.ಕೆ.<br>ಪ್ರಾಂಶುಪಾಲರು, ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ,<br>(**ಶಾಲಾ ಶಿಕ್ಷಣ ಮತ್ತು ಸಾಕ್ಷರತೆ** ಆಯುಕ್ತರ ಪರವಾಗಿ) | ಸದಸ್ಯರು |
| 15. | ಪ್ರೊ ಸಂಗಪ್ಪ ವೈ.<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು |
| 16. | ಶ್ರೀ ಕೆ. ರಾಜು ಮೊಗವೀರ, ಕೆ.ಎ.ಎಸ್.<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ |

**ಅನುಪಸ್ಥಿತರು:**

| | | |
|---|---|---|
| 1. | ಡಾ. ಸಂದೇಶ್ ಕೆ.ಎಸ್.<br>(ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪರವಾಗಿ) | ಸದಸ್ಯರು |

# <u>ಪ್ರಾರಂಭಿಕ</u>

**ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಯವರನ್ನು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.**

- **ಸ್ವಾಗತ:**

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಬಿ) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿರುವ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಗಳಲ್ಲಿ ಭಾಗವಹಿಸಲು ಪ್ರತ್ಯಾಯೋಜಿಸಲಾಗಿರುವ **ಡಾ.ಕವಿತಾ ಕೆ.ಆರ್.** ಇವರನ್ನು ಸಭೆಗೆ ಸ್ವಾಗತಿಸಲಾಯಿತು.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಜೆ) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿರುವ ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಗಳಲ್ಲಿ ಭಾಗವಹಿಸಲು ಪ್ರತ್ಯಾಯೋಜಿಸಲಾಗಿರುವ **ಶ್ರೀಮತಿ ಪುಷ್ಪಲತಾ ಹೆಚ್.ಕೆ.** ಇವರನ್ನು ಸಭೆಗೆ ಸ್ವಾಗತಿಸಲಾಯಿತು.

- **ಕೃತಜ್ಞತೆ:**

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಬಿ) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿರುವ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಗಳಲ್ಲಿ ಭಾಗವಹಿಸಲು ಪ್ರತ್ಯಾಯೋಜಿಸಲಾಗಿದ್ದ ಪ್ರಾದೇಶಿಕ ಜಂಟಿ ನಿರ್ದೇಶಕರಾಗಿದ್ದ **ಪ್ರೊ. ರಾಮೇಗೌಡ,** ಇವರು ಸೇವಾ ವಯೋನಿವೃತ್ತಿ ಹೊಂದಿರುತ್ತಾರೆ.

ಇವರು ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

## ಪ್ರಾಸ್ತಾವಿಕ

**ಮಾನ್ಯ ಕುಲಪತಿಯವರು ಮತ್ತೊಮ್ಮೆ ಎಲ್ಲರನ್ನು ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಿದರು.**

**ಈ ಕೆಳಗಿನ ವಿಷಯಗಳನ್ನು ಸಭೆಯ ಗಮನಕ್ಕೆ ತರಲಾಯಿತು.**

1. ದಿನಾಂಕ 29.03.2025ರಂದು ಜರುಗಲಿರುವ ಘಟಿಕೋತ್ಸವದಲ್ಲಿ ಮಾನ್ಯ ಕುಲಾಧಿಪತಿಗಳು ಭಾಗವಹಿಸಲಿದ್ದು, ಘಟಿಕೋತ್ಸವದ Minute to Minute Programme ನ್ನು ಮಾನ್ಯ ಕುಲಾಧಿಪತಿಗಳ ಸೂಚನೆ ಮೇರೆಗೆ ಕೆಲವೊಂದು ಅಗತ್ಯ ಬದಲಾವಣೆಗಳನ್ನು ಮಾಡಿಕೊಂಡು ಸಿದ್ಧಪಡಿಸಲಾಗುತ್ತಿದೆ ಎಂಬುದನ್ನು ಸಭೆಗೆ ತಿಳಿಸಲಾಯಿತು.

2. ವಿಶ್ವವಿದ್ಯಾನಿಲಯಗಳ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ದಿನಪತ್ರಿಕೆಗಳು ಪ್ರತಿದಿನವೂ ವರದಿ ಮಾಡುತ್ತಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

3. 2023-24ನೇ ಸಾಲಿಗೆ ಸರ್ಕಾರದಿಂದ ನಿವೃತ್ತಿ ಉಪದಾನ ರೂ.11.30 ಕೋಟಿ ಬಿಡುಗಡೆಯಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಅನುದಾನ ಬಿಡುಗಡೆಯಲ್ಲಿ ಸಹಕರಿಸಿದ ಜನಪ್ರತಿನಿಧಿಗಳಿಗೂ ಹಾಗೂ ವಿಶೇಷ ಕಾಳಜಿ ವಹಿಸಿದ ಸಿಂಡಿಕೇಟು ಸದಸ್ಯರುಗಳಿಗೆ ಕೃತಜ್ಞತೆ ಸಲ್ಲಿಸಲಾಯಿತು.

4. ಅಮಿಟಿ ವಿಶ್ವವಿದ್ಯಾಲಯ, ನೊಯ್ಡಾ ಇಲ್ಲಿ ಅಸೋಷಿಯೇಶನ್ ಆಫ್ ಇಂಡಿಯನ್ ಯುನಿರ್ವಸಿಟಿಸ್ (AIU) ವತಿಯಿಂದ ನಡೆದ ರಾಷ್ಟ್ರಮಟ್ಟದ ಅಂತರ್ ವಿಶ್ವವಿದ್ಯಾನಿಲಯ ಯುವಜನೋತ್ಸವ ಸ್ಪರ್ಧೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವು ಸಮಗ್ರ ಪ್ರಶಸ್ತಿಯಲ್ಲಿ ತೃತೀಯ ಸ್ಥಾನವನ್ನು ಪಡೆದಿರುವುದಾಗಿ ತಿಳಿಸಲಾಯಿತು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳ ತಂಡಕ್ಕೆ ಹಾಗೂ ಸಹಕಾರ ನೀಡಿದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕರಿಗೆ ಮತ್ತು ತಂಡದ ವ್ಯವಸ್ಥಾಪಕರುಗಳಿಗೆ ಅಭಿನಂದನೆಯನ್ನು ಸಲ್ಲಿಸಲಾಯಿತು.

5. ವಿಶ್ವವಿದ್ಯಾನಿಲಯ ಆವರಣದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮವು ಇದೇ ತಿಂಗಳ 17 ರಿಂದ 19ರವರೆಗೆ ಒಟ್ಟು ಮೂರು ದಿನಗಳು ನಡೆಯಲಿರುವುದನ್ನು ತಿಳಿಸಲಾಯಿತು.

6. ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನವು ವಿಶ್ವವಿದ್ಯಾನಿಲಯದ ಆವರಣದಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಹಾಗೂ ಯಶಸ್ವಿಯಾಗಿ ಜರುಗಿದ್ದು, ರಾಜ್ಯ ಮಟ್ಟದಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ. ಇದಕ್ಕೆ ಶ್ರಮಿಸಿದ ಜನಪ್ರತಿನಿಧಿಗಳನ್ನು, ಅಧಿಕಾರಿಗಳನ್ನು, ಅಧ್ಯಾಪಕರನ್ನು, ಆಡಳಿತ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಶ್ರಮವನ್ನು ಶ್ಲಾಘಿಸಲಾಯಿತು.

7. ಸ್ವಚ್ಛತೆಗೆ ಸಂಬಂಧಿಸಿದಂತೆ ಹಸಿಕಸ/ಒಣಕಸ ವಿಂಗಡಣೆ ಹಾಗೂ ವಿಲೇವಾರಿಯ ಬಗ್ಗೆ ಸ್ಥಳೀಯ ಪಂಚಾಯತ್ ನೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಿರುವ ಬಗ್ಗೆ ಹಾಗೂ ಸ್ವಚ್ಛತೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಪದವಿ ಮಟ್ಟದ ಪಠ್ಯಕ್ರಮದಲ್ಲಿಯೂ ಅಳವಡಿಸುವ ಬಗ್ಗೆ ನಿರ್ಧಾರ ಕೈಗೊಳ್ಳುತ್ತಿರುವುದಾಗಿ ಸಭೆಗೆ ತಿಳಿಸಲಾಯಿತು.
8. ಪದವಿ ಪರೀಕ್ಷೆಗಳ ಫಲಿತಾಂಶವನ್ನು ದಾಖಲೆ ಸಮಯದಲ್ಲಿ ಪ್ರಕಟಿಸುತ್ತಿರುವುದಾಗಿ ಸಭೆಗೆ ತಿಳಿಸಲಾಯಿತು.

## I. ನಡವಳಿಗಳ ದೃಢೀಕರಣ

**ದಿನಾಂಕ 18.02.2025ರಂದು ನಡೆದ ಸಿಂಡಿಕೇಟಿನ 2025ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡವಳಿಯ ದೃಢೀಕರಣ.**

**ತಿದ್ದುಪಡಿ ನಿರ್ಣಯ: ಕಾರ್ಯಸೂಚಿ ಸಂಖ್ಯೆ : ಹಣಕಾಸು:ವಿ.ಸ.1:1(2025)**

ಬೆಳಪು ಯೋಜನೆಗೆ ಸಂಬಂಧಿಸಿದಂತೆ, ಸರ್ಕಾರವು ಒದಗಿಸಿದ ಅನುದಾನವನ್ನು ಉದ್ದೇಶಿತ ಕಾರ್ಯಕ್ಕೆ ಮಾತ್ರ ಬಳಸಲು ಸರ್ಕಾರದ ನಿರ್ದೇಶನವಿದ್ದರೂ ಕೂಡಾ, ಸರ್ಕಾರದ ಆದೇಶ ಉಲ್ಲಂಘನೆ ಮಾಡಿ ಅಂತರಾಷ್ಟ್ರೀಯ ಹಾಸ್ಟೆಲ್ ಮತ್ತು ಇತರ ಚಟುವಟಿಕೆಗಳಿಗೆ ಬಳಸಿರುವುದು **ಹಾಗೂ ಈ ಬಗ್ಗೆ ಸಿಂಡಿಕೇಟಿಗೆ ಕಾರ್ಯಸೂಚಿಯನ್ನು ಮಂಡಿಸದಿರುವ ಬಗ್ಗೆ ಕಡತದಲ್ಲಿರುವ ದಾಖಲೆಗಳಿಂದ ಕಂಡುಬಂದಿರುತ್ತದೆ**. ಈ ವಿಷಯದ ಬಗ್ಗೆ ಮಾನ್ಯ ಸಿಂಡಿಕೇಟು ಗಂಭೀರವಾಗಿ ಪರಿಗಣಿಸಿ ಆ ಸಂದರ್ಭದಲ್ಲಿ ಕಾರ್ಯ ನಿರ್ವಹಿಸಿರುವ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಯವರಿಗೆ ಕಾರಣ ಕೇಳಿ ನೋಟೀಸನ್ನು ಜ್ಯಾರಿ ಮಾಡಿ, ಹದಿನೈದು ದಿನಗಳ ಒಳಗೆ ಪ್ರತಿಕ್ರಿಯೆ ನೀಡುವಂತೆ ಸೂಚಿಸಲು ನಿರ್ಣಯಿಸಲಾಯಿತು. ಅವಶ್ಯಕತೆಗೆ ಅನುಸಾರವಾಗಿ ಮುಂದೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

**- ಉಳಿದಂತೆ ನಡವಳಿಯನ್ನು ದೃಢೀಕರಿಸಲಾಯಿತು -**

## II. ಅನುಸರಣಾ ವರದಿಯ ಅನುಮೋದನೆ

**1) ದಿನಾಂಕ 30.12.2024ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಎಂಟನೇ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.**

**- ಅನುಮೋದಿಸಲಾಯಿತು –**

**2) ದಿನಾಂಕ 17.01.2025ರಂದು ನಡೆದ ಸಿಂಡಿಕೇಟಿನ 2025ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.**

**- ಅನುಮೋದಿಸಲಾಯಿತು -**

**III. ಈ ಸಿಂಡಿಕೇಟು ಸಭೆಗೆ ಮಂಡಿಸಲಿರುವ ಕಾರ್ಯಸೂಚಿಗಳು.**

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.2:1 (2025)

ವಿಷಯ: ಪಿಹೆಚ್.ಡಿ. ಪದವಿ ಪ್ರದಾನ ಮಾಡಿದ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.2:2 (2025)

ವಿಷಯ: 43ನೇ ವಾರ್ಷಿಕ ಘಟಿಕೋತ್ಸವದಲ್ಲಿ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಮುಂದುವರಿದು, ಕರ್ನಾಟಕ ಸರ್ಕಾರವು ಅನುಷ್ಠಾನಗೊಳಿಸಿದ UUCMS ತಂತ್ರಾಶದಲ್ಲಿನ ಅಂಕಪಟ್ಟಿ ಪ್ರಮಾಣ ಪತ್ರಗಳನ್ನು ಡಿಜಿಟಲ್ ರೂಪದಲ್ಲಿ ಸಿದ್ಧಪಡಿಸಿ Karnataka State Data Center (KSDC) ನಲ್ಲಿ ಶೇಖರಿಸಿ ಮತ್ತು ಪ್ರತಿಗಳನ್ನು National Academic Depository (NAD) ಮತ್ತು Digiloker ನಲ್ಲಿ ಕಡ್ಡಾಯವಾಗಿ ಅಳವಡಿಸುವಂತೆ ಸರಕಾರವು ನಿರ್ದೇಶಿಸಿರುತ್ತದೆ.

ಆದರೆ ವಿದ್ಯಾರ್ಥಿಗಳ ಉನ್ನತ ವ್ಯಾಸಂಗ / ಉದ್ಯೋಗ ನಿಮಿತ್ತ ವಿದೇಶಕ್ಕೆ ತೆರಳುವ ಸಂಧರ್ಭಗಳಲ್ಲಿ ವಿದೇಶಗಳಲ್ಲಿ Digiloker ಅಂಕಪಟ್ಟಿಗಳನ್ನು ಪರಿಗಣಿಸಿರುವುದಿಲ್ಲ. ಮೂಲ ಭೌತಿಕ ಅಂಕಪಟ್ಟಿಗಳನ್ನು ಒದಗಿಸದೇ ಇರುವುದರಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಇತರ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗದೇ ಇರುವುದು ಗಮನಕ್ಕೆ ಬಂದಿರುತ್ತದೆ.

ಇದರೊಂದಿಗೆ ವಿದೇಶಿ ವಿದ್ಯಾರ್ಥಿಗಳಿಗೆ PAN ಆಧಾರಿತ Digital Account ಹೊಂದಲು ಅಸಾಧ್ಯವಾಗಿರುವುದರಿಂದ ಅಂತಹ ವಿದ್ಯಾರ್ಥಿಗಳಿಗೆ Digiloker ನಲ್ಲಿ ಅಂಕಪಟ್ಟಿ/ಪದವಿ ಪ್ರಮಾಣ ಪತ್ರಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಭೌತಿಕ ಅಂಕಪಟ್ಟಿಗಳನ್ನು ನೀಡಲು ನಿರ್ಣಯಿಸಲಾಗಿದೆ.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.2:3 (2025)

ವಿಷಯ: 2025ನೇ ವರ್ಷದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ನಡೆಸಲು ರಚನೆಯಾದ ಪರೀಕ್ಷಕರ ಮಂಡಳಿಯ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.2:4 (2025)

ವಿಷಯ: ಯುಜಿಸಿ ನಿಯಮಾವಳಿ 2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗದ ಬೋಧಕರಿಗೆ ವೃತ್ತಿ ಪದೋನ್ನತಿ - ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.2:5 (2025)

ವಿಷಯ: ಡಾ.ಚಂದ್ರಶೇಖರ್ ಆರ್. ಸಹಾಯಕ ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಇವರ ಪರಿವೀಕ್ಷಣಾವಧಿ ಘೋಷಿಸುವ ಬಗ್ಗೆ ಹಾಗೂ ತಡೆಹಿಡಿಯಲಾಗಿರುವ ವಾರ್ಷಿಕ ವೇತನ ಭಡ್ತಿಗಳನ್ನು ಬಿಡುಗಡೆಗೊಳಿಸುವ ಬಗ್ಗೆ.

**ನಿರ್ಣಯ:** ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ದ.ಕ., ಮಂಗಳೂರು ಇವರು ಪತ್ರ ಸಂಖ್ಯೆ ಜಿಸಕಅ/ತಸ/ಸಿಆರ್-16/2003-04, ದಿನಾಂಕ 09.12.2024 ಪತ್ರದೊಂದಿಗೆ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಟ್ಟದ ಜಾತಿ ಪರಿಶೀಲನಾ ಸಮಿತಿ, ದ.ಕ. ಜಿಲ್ಲೆ ಇವರು ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಆದುದರಿಂದ ಪರಿವೀಕ್ಷಣಾ ಅವಧಿಯನ್ನು ದಿನಾಂಕ 28.01.2005 ರಿಂದ ಅನ್ವಯವಾಗುವಂತೆ ಘೋಷಿಸಿ, ತಡೆಹಿಡಿಯಲಾಗಿರುವ ವಾರ್ಷಿಕ ವೇತನ ಭಡ್ತಿಗಳನ್ನು ಬಿಡುಗಡೆಗೊಳಿಸಿ ಸದರಿಯವರ ವೇತನವನ್ನು 7ನೇ ಯುಜಿಸಿ ವೇತನ ಶ್ರೇಣಿಯಲ್ಲಿ ನಿಗದಿಪಡಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.2:6 (2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಬ್ಯಾಂಕ್ ಆಫ್ ಬರೋಡ ಬ್ಯಾಂಕ್ ಕಟ್ಟಡಕ್ಕೆ ಪರವಾನಿಗೆ ಅವಧಿ ಹಾಗೂ ಶುಲ್ಕ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.2:7 (2025)

ವಿಷಯ: ಸ್ವಾಯತ್ತ ಕಾಲೇಜುಗಳ ವಾರ್ಷಿಕ ಪುನರ್‌ಪರಿಶೀಲನೆ ಮತ್ತು ಮೌಲ್ಯಮಾಪನದ ಬಗ್ಗೆ.

**ನಿರ್ಣಯ:** ಪೂರ್ಣ ವಿವರಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ: ಸಾ.ಸ.2:8 (2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜಾಗಿರುವ ಕೆನರಾ ಕಾಲೇಜು, ಮಂಗಳೂರು ಎಂಬ ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಸಂಬಂಧ ಸ್ಥಾಯಿ ಸಮಿತಿ ರಚನೆ ಬಗ್ಗೆ.

**ನಿರ್ಣಯ:** ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಎಸ್.ಬಿ.ಎಂ. ಪ್ರಸನ್ನ ಇವರನ್ನು ಸ್ಥಾಯಿ ಸಮಿತಿಯ ಸಿಂಡಿಕೇಟು ಪ್ರತಿನಿಧಿಯಾಗಿ ನಾಮನಿರ್ದೇಶನ ಮಾಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.2:9 (2025)

ವಿಷಯ: ಪದವಿ ಮಟ್ಟದ ಅರ್ಥಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.2:10(2025)

ವಿಷಯ: ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ಪ್ರಯಾಣ ವೆಚ್ಚ ಮತ್ತು ವಾಸ್ತವಿಕ ವೆಚ್ಚವನ್ನು (Actuals) ಮರುನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.2:11 (2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಮತ್ತು Airport Authority of India (AAI) ಹಾಗೂ Fintopedia, Mumbai ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

**ನಿರ್ಣಯ:** ವಿಭಾಗದ ಅಧ್ಯಕ್ಷರೊಂದಿಗೆ ಚರ್ಚಿಸಿ, ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.2:12(2025)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ಜನವರಿ 2025ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** ವರದಿಯನ್ನು ಪರಿಗಣಿಸಲಾಯಿತು. ಮಾನ್ಯ ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರು ನೀಡಿರುವ ಸಲಹೆಯಂತೆ ಪ್ರತಿ ತಿಂಗಳು ಶೈಕ್ಷಣಿಕ / ಸಂಶೋಧನಾ ಚಟುವಟಿಕೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ವಿಭಾಗಗಳನ್ನು ಗುರುತಿಸುವ ಸಲುವಾಗಿ ಮಾರ್ಗಸೂಚಿ ರಚಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:13(2025)

ವಿಷಯ: Renovation work of existing Canteen Located at Mangalore University Mangalagangotri Campus under - NMPA CSR Scheme. ಅಂದಾಜುಪಟ್ಟಿ ಮೊತ್ತ ರೂ. 30.00 ಲಕ್ಷ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:14(2025)

ವಿಷಯ: Proposed Construction of Open Air Stage near cultural Museum located at Mangalore University Campus - ಅಂದಾಜು ಪಟ್ಟಿ ಅನುಮೋದನೆ ಬಗ್ಗೆ. Estimated Amount Rs. 11,00,000.00.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:15(2025)

ವಿಷಯ: ವಿಶ್ವವಿದ್ಯಾನಿಲಯದ ಕಾಲೇಜು, ಮಂಗಳೂರು ಇಲ್ಲಿನ ವಾಣಿಜ್ಯ ಕಟ್ಟಡದ ತರಗತಿ ಕೊಠಡಿ ಸಂಖ್ಯೆ 116 ನ್ನು ಕಂಪ್ಯೂಟರ್ ಲ್ಯಾಬ್ ಆಗಿ ಪರಿವರ್ತಿಸುವುದು ಮತ್ತು ಇದಕ್ಕೆ ಪೂರಕವಾದ ವಿದ್ಯುದ್ದೀಕರಣದ ಕಾಮಗಾರಿ - Under RUSA Component - 9 of 2.0. ಅಂದಾಜು ಪಟ್ಟಿ ಮೊತ್ತ ರೂ. 24,95,000.00.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:16(2025)

ವಿಷಯ: ವಿಶ್ವವಿದ್ಯಾನಿಲಯದ ಕಾಲೇಜು, ಮಂಗಳೂರು ಇಲ್ಲಿನ ಆಡಳಿತ ಕಚೇರಿಯಲ್ಲಿ Cubical Partition ನಿರ್ಮಿಸುವುದು ಮತ್ತು Wooden Table ಮತ್ತು ಕುರ್ಚಿ ಹಾಗೂ ಸ್ಟೋರೇಜ್ ಬಾಕ್ಸ್‌ಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿ ಮತ್ತು ಇದಕ್ಕೆ ಪೂರಕವಾದ ವಿದ್ಯುದ್ದೀಕರಣದ ಕಾಮಗಾರಿ - Under RUSA Component - 9 of 2.0. ಅಂದಾಜು ಪಟ್ಟಿ ಮೊತ್ತ ರೂ. 6,11,000.00.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:17(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಆಟದ ಮೈದಾನದಲ್ಲಿ Shot Put Court, Discuss throw court, Concrete Cricket Pitch ಮತ್ತು Mechanical Ground Level Roller ಗೆ ಶೆಡ್ ನಿರ್ಮಿಸುವ ಕಾಮಗಾರಿ. ಅಂದಾಜು ಮೊತ್ತ ರೂ. 7.30 ಲಕ್ಷಗಳು.

**ನಿರ್ಣಯ:** ಕಾರ್ಯಸೂಚಿಯನ್ನು ಕೈಬಿಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:18(2025)

ವಿಷಯ: Construction of Ladies Hostel for SC/ST Students under AICTE - CAFES Scheme at Mangalore University Campus, Mangalagangothri - ಹೆಚ್ಚುವರಿ ಪರಿಮಾಣ (Excess Qty. - Work Slip) ಉಳಿಕೆ ಮೊತ್ತ ಮತ್ತು ಪರಿಷ್ಕೃತ ಅಂದಾಜುಪಟ್ಟಿಯ ಅನುಮೋದನೆ ಬಗ್ಗೆ.

**ನಿರ್ಣಯ:** ಮಾನ್ಯ ಸಿಂಡಿಕೇಟು ಸದಸ್ಯರುಗಳಿಂದ ಸ್ಥಳ ಪರಿಶೀಲನೆ ನಡೆಸಿ, ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:19(2025)

ವಿಷಯ: ರೂಸಾ ಅನುದಾನದಡಿ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಉದ್ಯೋಗ ಮಾಹಿತಿ ಕೇಂದ್ರ ಕಟ್ಟಡದ ಮೊದಲನೇ ಅಂತಸ್ತಿನಲ್ಲಿ ಪರಿಸರ ವಿಜ್ಞಾನ ವಿಭಾಗ ಕಟ್ಟಡದ ನಿರ್ಮಾಣ ಕಾಮಗಾರಿ - ಹೆಚ್ಚುವರಿ ಪರಿಮಾಣ ಮೊತ್ತ (Excess Quantity-WorkSlip) ಹಾಗೂ ಹೆಚ್ಚುವರಿ ಐಟಂ ಮತ್ತು ಉಳಿಕೆ ಮೊತ್ತಕ್ಕೆ ಹಾಗೂ ಪರಿಷ್ಕೃತ ಅಂದಾಜು ಪಟ್ಟಿ ಮೊತ್ತದ ಅನುಮೋದನೆ ಬಗ್ಗೆ.

**ನಿರ್ಣಯ:** ಪೂರ್ಣ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿಯನ್ನು ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:20(2025)

ವಿಷಯ: Construction of Shree Narayana Guru Adhyayana Peeta Building at Mangalore University Campus, Mangalagangothri - ಹೆಚ್ಚುವರಿ ಪರಿಮಾಣ ಮೊತ್ತ (Excess Qty., - Work Slip) ಹಾಗೂ ಹೆಚ್ಚುವರಿ ಐಟಂ (EIRL) ಮತ್ತು ಉಳಿಕೆ ಮೊತ್ತಗಳಿಗೆ ಹಾಗೂ ಪರಿಷ್ಕೃತ ಅಂದಾಜುಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಪೂರ್ಣ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿಯನ್ನು ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:21(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿಜ್ಞಾನ ಸಂಕೀರ್ಣ ಕಟ್ಟಡದ ವಿಶೇಷ ದುರಸ್ತಿ ಕಾಮಗಾರಿ (ರೂಸಾ ಅನುದಾನ) - ಪರಿಷ್ಕೃತ ಅಂದಾಜುಪಟ್ಟಿ ಮತ್ತು ವರ್ಕ್‌ಸ್ಲಿಪ್ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಪೂರ್ಣ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿಯನ್ನು ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:22(2025)

ವಿಷಯ: Providing 40 KLD Capacity STP (Sewage Treatment Plant) for boys Hostel at Mangalore University Campus, Mangalagangothri - ಹೆಚ್ಚುವರಿ ಪರಿಮಾಣ ಮೊತ್ತ (Excess Qty., Work Slip) ಹಾಗೂ ಹೆಚ್ಚುವರಿ ಐಟಂ (EIRL) ಮತ್ತು ಉಳಿಕೆ ಮೊತ್ತಗಳಿಗೆ ಹಾಗೂ ಪರಿಷ್ಕೃತ ಅಂದಾಜುಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:23(2025)

ವಿಷಯ: Providing 40 KLD Capacity STP (Sewage Treatment Plant) for boys hostels at Mangalore University Campus, Mangalagangothri - ಕಾಲಾವಧಿ ವಿಸ್ತರಣೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.2:24(2025)

ವಿಷಯ: ಪ್ಯಾಕೇಜ್ ಟೆಂಡರ್ ಕಾಮಗಾರಿ

(1/41) - ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಪ್ರಾಧ್ಯಾಪಕರ ವಸತಿಗೃಹ ಕಟ್ಟಡ ಸಂಖ್ಯೆ ಬಿ-4ರ ಲೀಚ್‌ಪಿಟ್ ಮರು ವ್ಯವಸ್ಥೆ ಹಾಗೂ ಒಳಾಂಗೀಣ ನೀರುವ ಸರಬರಾಜು ಕೊಳವೆಯನ್ನು ಮರು ವ್ಯವಸ್ಥೆ ಮಾಡುವುದು.

(2/41) - ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಇ ಮಾದರಿ ವಸತಿಗೃಹ ಸಂಖ್ಯೆ 1 ರ ಕುಸಿದಿರುವ ಲೀಚ್‌ಪಿಟ್ ನ ಮರು ವ್ಯವಸ್ಥೆ-ಕಾಮಗಾರಿಗಳ ಕಾಲಾವಧಿ ವಿಸ್ತರಣೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.2:25(2025)

ವಿಷಯ: ಡಾ.ಕೆ.ಸಿ.ಮಹದೇಶ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

ವಿಷಯ 1 : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಈ ಹಿಂದೆ tally software ಖರೀದಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು (ಟೆಂಡರ್, ಖರೀದಿ ಆದೇಶ, ಬಿಲ್ ಇತ್ಯಾದಿ ಸಂಪೂರ್ಣ ವಿವರ) ಹಾಗೂ ಅದನ್ನು ಅಳವಡಿಸಿರುವ ವಿವರಗಳನ್ನು ಸಭೆಗೆ ಮಂಡಿಸಿ ಚರ್ಚಿಸಿ ನಿರ್ಣಯಿಸುವುದು.

| | |
|---|---|
| **ನಿರ್ಣಯ:** | ಈ ಹಿಂದೆ Tally Software ನ್ನು ಖರೀದಿಸಲಾಗಿದೆ ಹಾಗೂ ಇದನ್ನು ಕೇವಲ ನಾಲ್ಕು ಮಂದಿ ಮಾತ್ರ ಬಳಸಬಹುದಾಗಿದೆ ಎಂಬುದನ್ನು ಸಭೆಯ ಗಮನಕ್ಕೆ ತರಲಾಯಿತು. |
| ವಿಷಯ 2 : | ಮಂಗಳೂರು ವಿಶ್ವವಿದ್ಯಾಲಯದಲ್ಲಿ ಚಾಲ್ತಿಯಲ್ಲಿರುವ ಪೆನ್ಷನ್ ಫಂಡ್ ಖಾತೆಯ ಆರಂಭದಿಂದ (ಆರಂಭದ ದಿನಾಂಕ) ಇಲ್ಲಿಯವರೆಗೆ debit, credit ಹಾಗೂ ಇಂದಿನ ದಿನದವರೆಗಿನ balance sheet ಅನ್ನು ಸಭೆಗೆ ಸಲ್ಲಿಸುವುದು ಮತ್ತು ಚರ್ಚಿಸಿ ನಿರ್ಣಯಿಸುವುದು. |
| **ನಿರ್ಣಯ:** | ಈ ಬಗ್ಗೆ ಇದೇ ಸಭೆಯ ಕಾರ್ಯಸೂಚಿ ಸಂಖ್ಯೆ ಸಿಂಡಿಕೇಟು: ಸಾ.ಸ.2:45(2025)ರಲ್ಲಿ ಮಂಡಿಸಿದ್ದು, ನಿರ್ಣಯ ಕೈಗೊಳ್ಳಲಾಗಿದೆ. |
| ವಿಷಯ 3 : | ಅಂತಾರಾಷ್ಟ್ರೀಯ ಹಾಸ್ಟೆಲ್ ಕಟ್ಟಡ ಕಾಮಗಾರಿಗೆ ಈವರೆಗೆ ಪಾವತಿಸಿರುವ ಒಟ್ಟು ಮೊತ್ತ, ದಿನಾಂಕಗಳು ಹಾಗೂ ಚೆಕ್ ನಂಬರ್‌ಗಳ ಸಮೇತ ಸದರಿ ಪಾವತಿಗೆ ಸಂಬಂಧಪಟ್ಟಂತೆ ಎಲ್ಲಾ ಹಂತದ ಎಸ್ಟಿಮೇಟ್, ಅನುಮೋದನೆ ನೀಡಿರುವ ಪ್ರತಿ ಹಾಜರುಪಡಿಸುವುದು. ಪ್ರತಿ ಹಂತದಲ್ಲೂ ಪಾವತಿಸಿರುವ ಮೊತ್ತ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದುಕೊಂಡಿರುವ ಪ್ರತಿಗಳನ್ನು ಹಾಜರುಪಡಿಸುವುದು. ಇತ್ತೀಚಿನ ಹೈಕೋರ್ಟ್ ಆದೇಶ arbitrationಗೆ ಸಂಬಂಧಪಟ್ಟಂತೆ ವಿಶ್ವವಿದ್ಯಾನಿಲಯ ತೆಗೆದುಕೊಂಡಿರುವ ಕ್ರಮಗಳು ಮತ್ತು ಇದಕ್ಕೆ ಸಿಂಡಿಕೇಟಿನ ಅನುಮೋದನೆ ಪಡೆಯಲಾಗಿದೆಯಾ? ಸಂಪೂರ್ಣ ವಿವರಗಳನ್ನು ಸಭೆಗೆ ಮಂಡಿಸಿ ಚರ್ಚಿಸಿ ನಿರ್ಣಯಿಸಲು ಕೋರಿದೆ. |
| **ನಿರ್ಣಯ:** | Arbitration Award ಗೆ ಸಂಬಂಧಪಟ್ಟಂತೆ, ಗೌರವಾನ್ವಿತ Tribunal ಆದೇಶವನ್ನು ಸಕ್ಷಮ ಪ್ರಾಧಿಕಾರ ಹೊಂದಿರುವ ಕಮರ್ಷಿಯಲ್ ನ್ಯಾಯಾಲಯದಲ್ಲಿ ಪ್ರಶ್ನಿಸಿ ದಾವೆ ದಾಖಲಿಸಲಾಗಿದೆ ಹಾಗೂ ವಿಚಾರಣೆ ಪ್ರಗತಿಯಲ್ಲಿರುವ ಬಗ್ಗೆ ಸಭೆಗೆ ಮಾಹಿತಿ ನೀಡಲಾಯಿತು. |
| ವಿಷಯ 4 : | ವಿಶ್ವವಿದ್ಯಾನಿಲಯದಿಂದ 2024 ಆಗಸ್ಟ್ ತಿಂಗಳ 1 ರಿಂದ 2025 ಫೆಬ್ರವರಿ ತಿಂಗಳವರೆಗೆ, ಅತಿಥಿ ಉಪನ್ಯಾಸಕರ, ಹೊರಗುತ್ತಿಗೆ, ಖಾಯಂ ಮತ್ತು ತಾತ್ಕಾಲಿಕ ನೌಕರರ ಸಂಬಳವನ್ನು ಹೊರತುಪಡಿಸಿ, ಇತರೆ ಬಿಲ್ಲುಗಳು, ಯಾವ ಯಾವ ಬಿಲ್ಲುಗಳು, ಯಾವ ವರ್ಷದ ಬಿಲ್ಲುಗಳು, ಎಷ್ಟು ಹಣವನ್ನು ಯಾವ ಯಾವ ಬಿಲ್ಲುಗಳಿಗೆ ನೀಡಲಾಗಿದೆ. ಚೆಕ್, ನೆಫ್ಟ್, ಮಾಡಿರುವ ಸಂಪೂರ್ಣ ವಿವರಗಳನ್ನು ಸಭೆಗೆ ಮಂಡಿಸಲು ಕೋರಿದೆ ಮತ್ತು ಚರ್ಚಿಸಿ ನಿರ್ಣಯಿಸಲು ಕೋರಿದೆ. |
| **ನಿರ್ಣಯ:** | ಸಂಬಂಧಿಸಿದ ಮಾಹಿತಿಯನ್ನು ಸಭೆಗೆ ನೀಡಲಾಯಿತು. |

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.2:26(2025)

ವಿಷಯ: ಶ್ರೀ ರಘುರಾಜ್ ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.
**ಪ.ಜಾತಿ / ಪಂಗಡದ ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಚರ್ಚಿಸಿ, ನಿರ್ಣಯ ಕೈಗೊಳ್ಳುವುದು.**

ವಿಷಯ 1 : ನೂತನವಾಗಿ ಪ್ರವೇಶಾತಿ ಪಡೆದಿರುವ (2023-24) ಸಂಶೋಧನಾ ವಿದ್ಯಾರ್ಥಿಗಳಿಗೆ, ಹಿಂದಿರುವ ಎಲ್ಲಾ ಸೌಲಭ್ಯಗಳನ್ನು (ಸಂಶೋಧನಾ ಶಿಷ್ಯವೇತನ, ಸಾಧಿಲ್ವಾರು ವೆಚ್ಚ, ರಾಷ್ಟ್ರೀಯ/ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ತಗಲುವ ವೆಚ್ಚ, ಸಂಶೋಧನಾ ಪ್ರಬಂಧಕ್ಕೆ ತಗಲುವ ವೆಚ್ಚ) ಯಥಾಸ್ಥಿತಿಗೆ ಕಾಯ್ದಿರಿಸುವ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವುದು.

**ನಿರ್ಣಯ:** ಈಗಾಗಲೇ 2022-23ರಲ್ಲಿ ನೀಡಲಾಗುತ್ತಿದ್ದ ಎಲ್ಲಾ ಸೌಲಭ್ಯಗಳನ್ನು ಅನುದಾನದ ಲಭ್ಯತೆ ಮೇರೆಗೆ ಮುಂದುವರಿಸಲು ತೀರ್ಮಾನಿಸಲಾಯಿತು.

ವಿಷಯ 2 : ಪಿಹೆಚ್.ಡಿ ಪ್ರವೇಶಾತಿ ಕಾಲಕಾಲಕ್ಕೆ ನಡೆಯದೆ ತಡವಾಗಿರುವ ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳುವುದು.

**ನಿರ್ಣಯ:** ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲಾಗುವುದು.

ವಿಷಯ 3 : ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸೌಲಭ್ಯಗಳಲ್ಲಿ ಬದಲಾವಣೆ ಮಾಡದೆ ಯಥಾಸ್ಥಿತಿಯಲ್ಲಿ ಮುಂದುವರಿಸುವುದು.

**ನಿರ್ಣಯ:** ಅನುದಾನದ ಲಭ್ಯತೆ ಮೇರೆಗೆ ಮುಂದುವರಿಸಲು ತೀರ್ಮಾನಿಸಲಾಯಿತು

ವಿಷಯ 4 : ಕಳೆದ 3-4 ತಿಂಗಳಿಂದ ಸಂಶೋಧನಾ ಶಿಷ್ಯವೇತನ ನೀಡಲಾಗಿಲ್ಲ. ಕಾಲಕಾಲಕ್ಕೆ ಸಂಶೋಧನಾ ವಿದ್ಯಾರ್ಥಿಗಳಿಗೆ ನೆರವಾಗುವಂತೆ ಸಂಶೋಧನಾ ಶಿಷ್ಯವೇತನ ನೀಡುವಂತೆ ಚರ್ಚಿಸಿ, ನಿರ್ಣಯ ಕೈಗೊಳ್ಳುವುದು.

**ನಿರ್ಣಯ:** ಅನುದಾನದ ಲಭ್ಯತೆಯ ಮೇರೆಗೆ ಆದ್ಯತೆಯಲ್ಲಿ ಮಾರ್ಚ್ 2025ರ ಕೊನೆಯ ವಾರದಲ್ಲಿ ಡಿಸೆಂಬರ್ 2024ರವರೆಗಿನ ಶಿಷ್ಯವೇತನ ನೀಡಲು ನಿರ್ಣಯಿಸಲಾಯಿತು.

| | |
|---|---|
| ವಿಷಯ 5 : | ಮಂಗಳೂರು ವಿಶ್ವವಿದ್ಯಾನಿಲಯದ ಸಮಾಜಕಾರ್ಯ ಪಿಹೆಚ್.ಡಿ. ಪ್ರವೇಶ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಬಗ್ಗೆ ರಾಜ್ಯಪಾಲರಿಗೆ ನೀಡಿರುವ ದೂರಿನ ಬಗ್ಗೆ ಚರ್ಚೆ ಮತ್ತು ಈ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳುವುದು. |
| **ನಿರ್ಣಯ:** | ಈ ಬಗ್ಗೆ ಇದೇ ಸಭೆಯಲ್ಲಿ ಕಾರ್ಯಸೂಚಿ ಸಂಖ್ಯೆ ಎಸಿಸಿ:ಸಾ.ಸ.2:41(2025)ರಲ್ಲಿ ಮಂಡಿಸಿದ್ದು, ನಿರ್ಣಯ ಕೈಗೊಳ್ಳಲಾಗಿದೆ. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.2:27(2025) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಭೂಗೋಳ ಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಂಯೋಜಕ (ಸ್ವತಂತ್ರ)ರನ್ನು ಮುಂದುವರಿಸುವ ಪ್ರಸ್ತಾವನೆಯ ಬಗ್ಗೆ. |
| **ನಿರ್ಣಯ:** | ಅಧ್ಯಯನ ವಿಭಾಗಕ್ಕೆ ಸಂಯೋಜಕ (ಸ್ವತಂತ್ರ)ರನ್ನು ಮುಂದುವರಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಪರೀಕ್ಷಾಂಗ:ಸಾ.ಸ.2:28(2025) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ 43ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಿರುವ ಚಿನ್ನದ ಪದಕಗಳ ತಯಾರಿಕಾ ವೆಚ್ಚಕ್ಕೆ ಅನುಮೋದನೆ ನೀಡುವ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ:ಸಾ.ಸ.2:29(2025) |
| ವಿಷಯ: | ಘಟಿಕೋತ್ಸವದಲ್ಲಿ ಪ್ರದಾನ ಮಾಡಲಿರುವ ನಗದು ಪುರಸ್ಕಾರದ ಕನಿಷ್ಠ ಮೊತ್ತವನ್ನು ನಿಗದಿಗೊಳಿಸುವ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.2:30(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಜಮೀನಿನಲ್ಲಿ ತಾಲೂಕು ಮಟ್ಟದ ಕಚೇರಿಗಳ ನಿರ್ಮಾಣಕ್ಕೆ ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಇವರು ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಯಲ್ಲಿ ಕಾರ್ಯಸೂಚಿಯನ್ನು ಮರು ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.2:31(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯಕಾರಿ ಅಭಿಯಂತರರ ನೇಮಕ - ಘಟನೋತ್ತರ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.2:32(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಹಿರಿಯ ಸಹಾಯಕ ಹುದ್ದೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿಯಂತ್ರಿಸುವ ತಿದ್ದುಪಡಿ ಪರಿನಿಯಮಕ್ಕೆ ಸರಕಾರವು ಸೂಚಿಸಿರುವ ತಿದ್ದುಪಡಿಯನ್ನು ಅಳವಡಿಸಿಕೊಳ್ಳುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.2:33(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ವೃಂದ ಮತ್ತು ನೇಮಕಾತಿ ನಿಯಮಗಳ ಕ್ರೋಢೀಕೃತ ಪರಿಷ್ಕೃತ ಪರಿನಿಯಮಗಳ ಅನುಮೋದನೆ ಬಗ್ಗೆ.

**ನಿರ್ಣಯ:** ವಿದ್ಯಾರ್ಹತೆಗೆ ಸಂಬಂಧಿಸಿದ ಕೆಲವು ಅಗತ್ಯ ತಿದ್ದುಪಡಿಗಳನ್ನು ಸೂಚಿಸಿ ಕುಲಸಚಿವರು ಮತ್ತೊಮ್ಮೆ ಪರಿಶೀಲಿಸಿ ಸಭೆಗೆ ಮಂಡಿಸುವಂತೆ ತೀರ್ಮಾನಿಸಿ ಮುಂದೂಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.2:34(2025)

ವಿಷಯ: ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ NMEICT ಯೋಜನೆಯಡಿ ಭಾರತ ಸಂಚಾರ ನಿಗಮ ಲಿ., (BSNL) ನಿಂದ 1 Gbps Internet Connectivityಯ ಶುಲ್ಕ ಪಾವತಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.2:35(2025)

ವಿಷಯ: ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ - ಪದವಿ (ಎರಡನೇ ಚತುರ್ಮಾಸ) ಪಠ್ಯ ಪುಸ್ತಕಗಳನ್ನು ಮುದ್ರಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.2:36(2025)

ವಿಷಯ: DST SERB - SURE Project - 2024-25ನೇ ಸಾಲಿನಲ್ಲಿ ಪ್ರಯೋಗಾಲಯಕ್ಕೆ ಅಗತ್ಯವಿರುವ ರಾಸಾಯನಿಕ/ಗ್ಲಾಸ್‌ವೇರ್‌ಗಳನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.2:37(2025)

ವಿಷಯ: CARER ಕೇಂದ್ರ - Quantulus - 1220 Liquid Scintillation Counting (LSC) System ನ ಬಳಕೆ ವಸ್ತುಗಳನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.2:38(2025)

ವಿಷಯ: CARER ಕೇಂದ್ರ - Quantulus - 1220 Ultra Low Level Liquid Scintillation Counter/Spectrometer (LSC) ಉಪಕರಣದ ವಾರ್ಷಿಕ ನಿರ್ವಹಣೆಗೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.2:39(2025)

ವಿಷಯ: IARP ರಾಷ್ಟ್ರೀಯ ಕಾರ್ಯಕ್ರಮಕ್ಕೆ ಬೇಕಾದ ಸಾಮಾಗ್ರಿಗಳು ಮತ್ತು ಕಾರ್ಯಕ್ರಮ ನಿರ್ವಹಣೆಯ ಇಂಡೆಂಟಿಗೆ ಘಟನೋತ್ತರ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.2:40(2025)

ವಿಷಯ: BRNS Research Project, CARER - Ozone Monitor ಉಪಕರಣವನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.2:41(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದ ಪಿಹೆಚ್.ಡಿ. ಕಾರ್ಯಕ್ರಮದ ಪ್ರವೇಶಾತಿ ಪ್ರಕ್ರಿಯೆ ಬಗ್ಗೆ ನಡೆದ ಕೆಲವು ಘಟನೆಗಳು ಹಾಗೂ ಮಾಧ್ಯಮಗಳಲ್ಲಿ ಮತ್ತು ಕೆಲವು ಪತ್ರಿಕೆಗಳಲ್ಲಿ ಬಂದ ವರದಿ ಹಾಗೂ ಗೌರವಾನ್ವಿತ ರಾಜ್ಯಪಾಲರಿಗೆ ದೂರು ಸಲ್ಲಿಕೆಯಾಗಿರುವ ಬಗ್ಗೆ.

**ನಿರ್ಣಯ:** ಸಕ್ಷಮ ಪ್ರಾಧಿಕಾರದ ಗಮನಕ್ಕೆ ತಾರದೆ ಗೌರವಾನ್ವಿತ ರಾಜ್ಯಪಾಲರಿಗೆ ದೂರು ನೀಡಿರುವುದು ಹಾಗೂ ಪತ್ರಿಕೆಗಳಿಗೆ ಮಾಹಿತಿ ನೀಡಿ ವಿಶ್ವವಿದ್ಯಾನಿಲಯದ ವಿರುದ್ಧ ನಕರಾತ್ಮಕ ಮಾಹಿತಿ ಪ್ರಕಟವಾಗಲು ಕಾರಣರಾದ ಡಾ. ಪಿ.ಜಿ. ಅಕ್ವಿನಾಸ್ ಇವರು ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮವನ್ನು ಉಲ್ಲಂಘಿಸಿದಂತಾಗಿದೆ. ಈ ಬಗ್ಗೆ ಇಲಾಖಾ ತನಿಖೆ ನಡೆಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ:ಸಾ.ಸ.2:42(2025)

ವಿಷಯ: ಡಾ.ಯಶಸ್ವಿನಿ ಬಿ., ಇವರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ: 794/2023 (S-RES) ಕುರಿತು ವಿಶ್ವವಿದ್ಯಾನಿಲಯದ ವತಿಯಿಂದ ಮುಂದಿನ ಕ್ರಮಕೈಗೊಳ್ಳುವ ಬಗ್ಗೆ.

**ನಿರ್ಣಯ:** ವಿಸ್ತೃತವಾಗಿ ಚರ್ಚಿಸುವ ಸಲುವಾಗಿ ಕಾರ್ಯಸೂಚಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮುಂದೂಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.2:43(2025)

**ವಿಷಯ:** ಡಾ.ವಿಪಿಎಸ್ ನಾಯ್ಡು, Chief Scientist & Professor (AcSIR), CSIR-National Aerospace Laboratories, Bangalore ಇವರಿಗೆ ಡಿ.ಎಸ್ಸಿ. (Doctor of Sciences) ಪದವಿ ಪ್ರದಾನ ಮಾಡುವ ಬಗ್ಗೆ.

**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.2:44(2025)

**ವಿಷಯ:** ಡಾ.ಎಸ್.ಬಿ.ಎಂ. ಪ್ರಸನ್ನ ಮತ್ತು ಡಾ.ಕೆ.ಸಿ. ಮಹದೇಶ ಸಲ್ಲಿಸಿರುವ ಪ್ರಸ್ತಾವನೆ - ಟೆಂಡರ್ ಪರಿಶೀಲನಾ ಸಮಿತಿಯ ಪರಿಶೀಲನೆ ನಂತರ ಎಲ್.1 ಮತ್ತು ಎಲ್.2 ಎಂದು ಪರಿಗಣಿಸಲು ತಾಂತ್ರಿಕ ಸಭೆಯ ಮುಂದೆ ಮಂಡಿಸುವುದು.

**ನಿರ್ಣಯ:** "**ಟೆಂಡರು ಸಮಿತಿ**"ಯನ್ನು ಈ ಹಿಂದಿನಂತೆಯೇ "**ಟೆಂಡರ್ ತಾಂತ್ರಿಕ ಸಮಿತಿ**" ಎಂದು ಮರುನಾಮಕರಣಗೊಳಿಸುವುದು ಹಾಗೂ ಈ ಸಮಿತಿಗೆ ಈ ಹಿಂದೆ ನಿಗದಿಪಡಿಸಲಾಗಿದ್ದ ಎಲ್ಲಾ ಕಾರ್ಯವ್ಯಾಪ್ತಿಯನ್ನು ಪುನರ್ ಸ್ಥಾಪಿಸುವುದು. ಅಂತಿಮವಾಗಿ ಎಲ್-1 ಮತ್ತು ಎಲ್-2 ಎಂದು ಪರಿಗಣಿಸಲು ಟೆಂಡರು ತಾಂತ್ರಿಕ ಸಭೆಯ ಮುಂದೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.2:45(2025)

**ವಿಷಯ:** ಡಾ.ಎಸ್.ಬಿ.ಎಂ. ಪ್ರಸನ್ನ ಮತ್ತು ಡಾ.ಕೆ.ಸಿ. ಮಹದೇಶ ಸಲ್ಲಿಸಿರುವ ಪ್ರಸ್ತಾವನೆ - ನಿವೃತ್ತರ ಪಿಂಚಣಿ ಹಂಚಲು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುವುದು

**ನಿರ್ಣಯ:** 2021-2022 ಮತ್ತು 2022-23ರಲ್ಲಿ ನಿವೃತ್ತರಾದ ಸಿಬ್ಬಂದಿಗಳಿಗೆ Gratuity and Commutation ಎರಡು Componants ಗಳನ್ನು 2023-24 ನೇ ಸಾಲಿನಲ್ಲಿ ನಿವೃತ್ತರಾದವರ ಜೊತೆಯಲ್ಲಿ ಪಾವತಿಸಲು ನಿರ್ಣಯಿಸಲಾಯಿತು. Surrender Leave encashment ಪಾವತಿಯನ್ನು (2021-2022 ಮತ್ತು 2022-23) ಹಿರಿತನದ ಆಧಾರದಲ್ಲಿ ಆದ್ಯತೆಯ ಮೇರೆಗೆ ಪಾವತಿಸಲು ನಿರ್ಣಯಿಸಲಾಯಿತು.

**ಇತರೆ ವಿಷಯಗಳು:**

1) ಸಿಂಡಿಕೇಟು ಕಾರ್ಯಸೂಚಿಗಳನ್ನು ಸದಸ್ಯರಿಗೆ ಮುಂಚಿತವಾಗಿ ಕಳುಹಿಸಿಕೊಡಲು ನಿರ್ಣಯಿಸಲಾಯಿತು. ಕಾರ್ಯಸೂಚಿಗಳಲ್ಲಿ ಅಗತ್ಯ ಮಾಹಿತಿಗಳನ್ನು ಸ್ಪಷ್ಟ ಹಾಗೂ ಸಂಕ್ಷಿಪ್ತವಾಗಿ ಒದಗಿಸುವುದು ಮತ್ತು ಓದಲು ಸ್ಪಷ್ಟವಾಗಿರುವ ಅನುಬಂಧಗಳ ಪ್ರತಿಗಳನ್ನು ಲಗತ್ತಿಸುವುದು.

2) ಮಾನ್ಯ ಸದಸ್ಯರಾದ ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿ ಇವರ ಸಲಹೆ ಮೇರೆಗೆ Double Entry System ಮತ್ತು Internal Audit ಕಾರ್ಯಚಟುವಟಿಕೆಗಳ ಸ್ಥಿತಿಗತಿಯ ಬಗ್ಗೆ ಮುಂದಿನ ಪ್ರತಿ ಸಿಂಡಿಕೇಟು ಸಭೆಗಳಲ್ಲಿ ಮಾಹಿತಿ ನೀಡುವಂತೆ ನಿರ್ಣಯಿಸಲಾಯಿತು.

3) ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಲೆಕ್ಕಪರಿಶೋಧಕರನ್ನು ತಾತ್ಕಾಲಿಕ/ಒಪ್ಪಂದದ ಮೇರೆಗೆ ನೇಮಿಸಿಕೊಳ್ಳುವ ಬಗ್ಗೆ ಸಿಂಡಿಕೇಟಿನ ಅನುಮೋದನೆಯನ್ನು ಪಡೆಯಲಾಯಿತು.

4) ಬೆಳಪು ಕಾಮಗಾರಿಗೆ ಸಂಬಂಧಿಸಿ ಉದ್ದೇಶಿತ ಕಾಮಗಾರಿಗೆ ಬಿಡುಗಡೆಯಾದ ಅನುದಾನವನ್ನು ಮತ್ತೊಂದು ಕಾಮಗಾರಿಗೆ ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿರುವ ಬಗ್ಗೆ, ಸಂಬಂಧಿಸಿದ ಕಡತವನ್ನು ಮಾನ್ಯ ಕುಲಪತಿಯವರೇ ಖುದ್ದಾಗಿ ಪರಿಶೀಲಿಸಿ, ತಪ್ಪಿತಸ್ಥರಿಗೆ ನೋಟೀಸು ಜ್ಯಾರಿ ಮಾಡಲು ಕೂಡಲೇ ಅಗತ್ಯ ಕ್ರಮವಹಿಸಲು ನಿರ್ಣಯಿಸಲಾಯಿತು.

5) ಶ್ರೀ ರಘುರಾಜ್ ಕೆ. ಇವರ ಸಲಹೆ ಮೇರೆಗೆ ಕಟ್ಟಡ ಸಮಿತಿಯ ಕಾರ್ಯಸೂಚಿಗಳ hard copy ಗಳನ್ನು ಕಟ್ಟಡ ಸಮಿತಿಯ ಸದಸ್ಯರಿಗೆ ನೀಡಲು ನಿರ್ಣಯಿಸಲಾಯಿತು.

6) ಶ್ರೀ ರಘುರಾಜ್ ಇವರ ವಿಶೇಷ ಮನವಿ ಮತ್ತು ಡಾ.ಕೆ.ಸಿ. ಮಹದೇಶ ಇವರ ಸಲಹೆ ಮೇರೆಗೆ, ಎಪ್ರಿಲ್ ಮೊದಲ ವಾರದಲ್ಲಿ ಪ.ಜಾತಿ/ಪ.ಪಂಗಡದ ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಕುಂದು ಕೊರತೆಗಳನ್ನು ಆಲಿಸಲು ಸಭೆ ನಡೆಸಲು ತೀರ್ಮಾನಿಸಲಾಯಿತು. ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಘುರಾಜ್, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ದ.ಕ., ತಾಲೂಕು ಸಮಾಜ ಕಲ್ಯಾಣ ಅಧಿಕಾರಿ, ಮಂಗಳೂರು, ವಸತಿ ನಿಲಯಗಳ ಅಧ್ಯಾಪಕ ಸಲಹೆಗಾರರು ಇವರುಗಳನ್ನು ಆಹ್ವಾನಿಸಿ ಸಭೆ ನಡೆಸಲು ನಿರ್ಣಯಿಸಲಾಯಿತು. ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಬರಬೇಕಾದ ವಿಶೇಷ ಅನುದಾನ ಬಿಡುಗಡೆ ಮಾಡಿಸುವ ನಿಟ್ಟಿನಲ್ಲಿ ಸರ್ಕಾರದ ಹಂತದಲ್ಲಿ Followup ಮಾಡಲು ಡಾ.ರಮೇಶ್ ಗಣಿ ಹಾಗೂ ಡಾ.ನರಸಿಂಹಯ್ಯ ಇವರನ್ನು ನಿಯೋಜಿಸಿರುವುದಾಗಿ ಸಭೆಗೆ ತಿಳಿಸಲಾಯಿತು.

7) ಪದವಿ ಹಂತದಲ್ಲಿ ಕಲಾ ನಿಕಾಯದ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ, ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ವಿಶೇಷ ತರಗತಿಗಳನ್ನು ನಡೆಸುವಂತೆ ಶ್ರೀ ರಘುರಾಜ್ ಇವರು ನೀಡಿದ ಸಲಹೆಗೆ ವಿಶ್ವವಿದ್ಯಾನಿಲಯದ ಉದ್ಯೋಗ ಮಾಹಿತಿ ಹಾಗೂ ಮಾರ್ಗದರ್ಶನ ಕೇಂದ್ರದ ಉಪ ಮುಖ್ಯಸ್ಥರು ಈ ಬಗ್ಗೆ ಸಂಯೋಜಿತ ಕಾಲೇಜುಗಳ ಎಲ್ಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಈಗಾಗಲೇ ಕ್ರಮಕೈಗೊಂಡಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.

8) ಶ್ರೀ ರಘುರಾಜ್, ಮಾನ್ಯ ಸಿಂಡಿಕೇಟು ಸದಸ್ಯರ ಪ್ರಸ್ತಾವನೆಯ ಮೇರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳಲ್ಲಿ ಎಪ್ರಿಲ್ 30 ರಂದು, ಸಾಂಸ್ಕೃತಿಕ ರಾಯಭಾರಿ ಬಸವೇಶ್ವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವಂತೆ ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಲು ನಿರ್ಣಯಿಸಲಾಯಿತು.

9) ಸಿಂಡಿಕೇಟ್ ಸದಸ್ಯರಿಗೆ ವಾಹನ ವ್ಯವಸ್ಥೆಯಲ್ಲಿ ಯಾವುದೇ ಲೋಪವಾಗದ ರೀತಿಯಲ್ಲಿ ಜಾಗ್ರತೆ ವಹಿಸಲು ಸಂಬಂಧಿಸಿದವರಿಗೆ ಸೂಚಿಸಲು ನಿರ್ಣಯಿಸಲಾಯಿತು.

**ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.**

ಸಹಿ/- ಸಹಿ/-

**ಕುಲಸಚಿವರು** **ಕುಲಪತಿಯವರು**